13.	ಮೈಸೂರು	340
14.	ರಾಯಚೂರು	365
15.	ಶಿವಮೊಗ್ಗ	191
16.	ತುಮಕೂರು	52
17.	ಕೋಲಾರ	211
18.	ಮಂಡ್ಯ	58
19.	ಉತ್ತರ ಕನ್ನಡ	36
20.	ದಕ್ಷಿಣ ಕನ್ನಡ	176
	ಒಟ್ಟು	4645

ಪುತ್ತೂರು ಪುರಸಭೆಗೆ ಎರಡನೇ ಹರಿತದ ನೀರಿನ ಯೋಜನೆ

477 (489) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ಪುರಸಭೆಗೆ ನಿಯೋಜಿಸಲಾಗಿರುವ ಎರಡನೇ ಹಂತದ ನೀರಿನ ಯೋಜನೆಯು ಯಾವ ಹಂತದಲ್ಲಿದೆ?

ಆ) ಈ ಯೋಜನೆಯು ಒಟ್ಟು ಯೋಜನಾ ವೆಚ್ಚವೆಷ್ಟು: ಮತ್ತು ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

ಅ) ಈ ಪಟ್ಟಣಕ್ಕೆ ಕುಮಾರ ದಾರ ನದಿಯನ್ನು ಮೂಲವಾಗಿಟ್ಟುಕೊಂಡು ವೀರಮಂಗಳದಲ್ಲಿ ಮೂಲಸ್ಥಾವರವನ್ನು ಪ್ರಸ್ತಾವನೆ ಮಾಡಿ ಯೋಜನೆಯನ್ನು ತಯಾರಿಸಲು 6 ಕೋಟಿ ರೂ. ಗಳಾಗ ಬಹುದೆಂದು ಅಂದಾಜು ಮಾಡಲಾಗಿತ್ತು. ಆದರೆ ಈ ಯೋಜನೆಗೆ ಹಾಕುವ ಕೊಳವೆ ಮಾರ್ಗಕ್ಕೆ ಜಲಶುದ್ದೀಕರಣಗಾರಕ್ಕೆ ಮತ್ತು ಇತರೆ ಕೆಲಸಗಳಿಗೆ ಭೂಸ್ವಾಧೀನ ಮಾಡಬೇಕಾಗುವುದೆಂದು ಹಾಗೂ ವಿದ್ಯುತ್‌ನ್ನು ಸರಬರಾಜು ಮಾಡಲು ಹೊಸ ಲೈನನ್ನು ಅಳವಡಿಸಬೇಕಾಗುವುದು ಎಂಬುದನ್ನು ಗಮನಿಸಿ, ಯೋಜನೆಯೂ ಅರ್ಥಿಕವಾಗಿ ಸೂಕ್ತವಲ್ಲವೆಂದು ಅಭಿಪ್ರಾಯ ಪಡಲಾಗಿದೆ.

ಆ) ಮೇಲಿನ 'ಅ' ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.